ಇಂದು ದಿನಾಂಕಃ 26.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ

ಈ ದಾವೆಯಲ್ಲಿ ನ್ಯಾಯಾಲಯದ ಮುಂದೆ ಏನು ಪ್ರಾರ್ಥನೆ ಮಾಡಿದ್ದೇನೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ದೂದಿಹಳ್ಳಿ ಗ್ರಾಮದ ಸರ್ವೆನಂ.2 ಎಷ್ಟು ಪೋಟ್ ಹಿಸ್ಸೆ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ ಸರ್ವೆನಂ.2 ರ ದಾಖಲೆಗಳನ್ನು ನಾನು ತೆಗೆಸಿರುತ್ತೇನೆ. ಸರ್ವೆನಂ.2/1, 2/2, 2/3 ರಂತೆ ಮೂರು ಪೋಟ್ ಹಿಸ್ಸಾ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 2/2ಬ ನನಗೆ ಸಂಬಂದ ಇರುವುದಿಲ್ಲ. ಆಸ್ತಿ ನಂ.402/5 ಹಾಗೂ 402/5ಎ ಕ್ಕೆ ಸಂಬಂದಿಸಿದಂತೆ ಕಲ್ಲಪ್ಪ ಎಂಬುವವರು ನನಗೆ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ವಾದ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ . ನಾನು ವಾದ ಪತ್ರದಲ್ಲಿ ನಮೂದಿಸಿರುವಂತೆ ರಿ ಸ ನಂ 2/2ಬ ರಲ್ಲಿ ಕಟ್ಟಿಸಿದ ಕೆಂಪು ಹಂಚಿನ ಮನೆ ಹಾಗೂ ಹುಲ್ಲಿನ ಮನೆ ಎಂದು ಸ್ಪಷ್ಟವಾಗಿ ನಮೂದಾಗಿರುತ್ತದೆ ಎಂದು ಮಾಹಿತಿ ನೀಡಿರುವುದಿಲ್ಲ. ಆಸ್ತಿ ಸಂಖ್ಯೆ 402/5 ಹಾಗೂ 402/5ಎ ಆಸ್ತಿಗಳು ನನಗೆ ಮೃತ್ಯು ಪತ್ರದ ಮೂಲಕ ಬಿಟ್ಟುಕೊಟ್ಟಿದ್ದಾರೆ ಎಂಬುದರ ಬಗ್ಗೆ ಮೃತ್ಯು ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ .

2. ಮೃತ್ಯು ಪತ್ರದಲ್ಲಿ ಬಿಟ್ಟುಕೊಟ್ಟಿರುವಂತಹ ಆಸ್ತಿ ಸಂಖ್ಯೆ ಸರ್ವೆನಂ .2/2ಬ ಕೇತ್ರ 6 ಗುಂಟೆ ಕ್ಷೇತ್ರದ ಪೈಕಿ ದಕ್ಷಿಣ ಭಾಗದ 3 ಗುಂಟೆ ಜಮೀನು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ವಿ ಪಿ ಸಿ ನಂ. 402 ರ 3 ಗುಂಟೆ ಜಮೀನನ್ನು ನಮಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆನಂ.2/2ಬ ಆಸ್ತಿ ಮೂಲತಃ ಉಜ್ಜಪ್ಪ ಸಿದ್ದಲಿಂಗಪ್ಪ ಹಾಲಪ್ಪ ರವರಿಗೆ ಸೇರಿದ್ದಾಗಿರುತ್ತದೆ. ಸದರಿ ಆಸ್ತಿ ಮೂಲತಃ ಚನ್ನಬಸಪ್ಪ ತಂದೆ ಕಲ್ಲಪ್ಪ ಮರಕಳ್ಳಿ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರವನ್ನು ಹಾಲಪ್ಪಜ್ಜರವರು ನನಗೆ ಬರೆದುಕೊಟ್ಟಿರುತ್ತಾರೆ. ಸರ್ವೆನಂ. 2/2ಬ, 6 ಗುಂಟೆ ಕ್ಷೇತ್ರವನ್ನು ಅದರ ಮಾಲೀಕರಾದ ಚನ್ನಬಬಸಪ್ಪ ತಂದೆ ಕಲ್ಲಪ್ಪ ಮರಕಳ್ಳಿ ರವರು ದಿನಾಂಕ 03-07-1996 ರಂದು ಶ್ರೀ ಕಲ್ಲೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿ ದೂದಿಹಳ್ಳಿ ರವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಆ ಪ್ರಕಾರ ದೇವಸ್ಥಾನದ ಕಮೀಟಿಯವರು ಕಲ್ಯಾಣ ಮಂಟಪವನ್ನು ಕಟ್ಟಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ

ದೇವಸ್ಥಾನದ ಹೆಸರಿಗೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಅದರಂತೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.